ಆಗಸ್ಟ್	26.34 ಲಕ್ಷ ರೂ.ಗಳು
ಸೆಪ್ಟೆಂಬರ್	24.08 ಲಕ್ಷ ರೂ.ಗಳು
ಆಕ್ಟೋಬರ್	26.77 ಲಕ್ಷ ರೂ.ಗಳು
ನವೆಂಬರ್	27.05 ಲಕ್ಷ ರೂ.ಗಳು
ಡಿಸೆಂಬರ್	24.11 ಲಕ್ಷ ರೂ.ಗಳು

ಈ. ಶಹಾಪುರ ಘಟಕವು ದಿನಾಂಕ: 24.7.88ರಂದು ಪ್ರಾರಂಭವಾಗಿದ್ದು, ಇದುವರೆವಿಗೂ ಲಾಭಗಳಿಸಿರುವುದಿಲ್ಲ.

ಉ. ಇತ್ತೀಚೆಗೆ ಬಸ್ ದರ ಏರಿಸಿದ ನಂತರ ದಿನಾಂಕ: 7.2.93ರಿಂದ ಪ್ರತಿ ದಿನದ ಸರಾಸರಿ ಆದಾಯವು 1.13 ಲಕ್ಷಗಳಾಗಿದ್ದು ದಿನಾಂಕ: 18 2.93ರಿಂದ ಬಸ್ ದರಗಳ ಪುನರ್ ಪರಿಷ್ಕರಣದ ನಂತರ ಪ್ರತಿ ದಿನದ ಸರಾಸರಿ ಆದಾಯವು 1.10 ಲಕ್ಷ ರೂ.ಗಳು ಬರುತ್ತಿದೆ.

ಬಂಟ್ವಾಳ ತಾಲ್ಲೂಕಿನಲ್ಲಿ ಕ್ರೀಡಾಂಗಣ ನಿರ್ಮಾಣದ ಬಗ್ಗೆ.

568 (1120): ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ)

ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಮತ್ತು ಕ್ರೀದಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬಂಟ್ವಾಳ ತಾಲ್ಲೂಕಿನಲ್ಲಿ ಒಂದು ಕ್ರೀಡಾಂಗಣದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ. ಬಂದಿದ್ದರೆ, ಕ್ರೀಡಾಂಗಣ ನಿರ್ಮಿಸಲು ಬೇಕಾಗುವ ಹಣ ವೆಷ್ಟು: ನಿರ್ಮಿಸಲು ಇದುವರೆವಿಗೂ ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು):–

ಅ. ಹೌದು.

ಆ. ಕ್ರೀಡಾಂಗಣ ನಿರ್ಮಾಣಕ್ಕೆ ಅವಶ್ಯವಾದ ನಿವೇಶನವನ್ನು ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.

1993-94ನೇ ಸಾಲಿಗೆ ಹೆಂಡದ ಅಂಗಡಿಗಳನ್ನು ಜಿಲ್ಲಾವಾರು ಮತ್ತು ತಾಲ್ಲೂಕುವಾರು ಏಲಂ ಮಾಡುವ ಬಗ್ಗೆ.

569 (1121): ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ):

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. 1993-94ನೇ ಸಾಲಿಗೆ ಹೆಂಡದ ಅಂಗಡಿಗಳನ್ನು ಜಿಲ್ಲಾವಾರು ಮತ್ತು ತಾಲ್ಲೂಕುವಾರು ಏಲಂ ಮಾಡುವುದೇ ?

ಆ. ಅಂಗಡಿವಾರು ಏಲಂ ಮಾಡುವುದರಿಂದ ನಿರುದ್ಯೋಗಿ ಯುವಕರಿಗೆ ಅನುಕೂಲವಾಗುವುದಿಲ್ಲವೆ ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):–